# ಪೊಲೀಸ್ ಆದರೆ ಈಗಲೂ ಸೈ



## ದಿವ್ಯಾ ಸುರೇಶ್
ಕಲರ್ಸ್ ಕನ್ನಡದ 'ತ್ರಿಪುರ ಸುಂದರಿ'ಯ ಆಮ್ರಪಾಲಿ

◆ **'ತ್ರಿಪುರ ಸುಂದರಿ'ಯಲ್ಲಿ ನಿಮ್ಮ ಪಾತ್ರದ ಮಹತ್ವ ಏನು?**

ಆಮ್ರಪಾಲಿಯಾಗಿ ಗಂಧರ್ವಲೋಕದಿಂದ ಭೂಲೋಕಕ್ಕೆ ರಾಜಕುಮಾರನನ್ನು ಹುಡುಕಿಕೊಂಡು ಬರುತ್ತೇನೆ. ಶಸ್ತ್ರಾಭ್ಯಾಸವನ್ನು ಕಲಿತು ಬಂದಿರುವ ನಾನು ಒಂದು ಮನೆಯಲ್ಲಿ ಬಂಧಿಯಾಗುತ್ತೇನೆ. ಅದು ರಾಜಕುಮಾರನ ಮನೆಯೇ ಆಗಿರುತ್ತದೆ. ಅದು ನನಗೆ ಗೊತ್ತಿರುವುದಿಲ್ಲ. ರಾಜಕುಮಾರನನ್ನು ಗಂಧರ್ವಲೋಕಕ್ಕೆ ಕರೆದುಕೊಂಡು ಹೋಗುವ ಉದ್ದೇಶ ನನ್ನದು. ಇಲ್ಲಿ ಪದಕ ಕಳೆದುಕೊಳ್ಳುತ್ತೇನೆ. ಇದರ ಆಧಾರದ ಮೇಲೆ ಕಥೆ ಹೋಗುತ್ತದೆ.

◆ **ಪೌರಾಣಿಕ ಹಿನ್ನೆಲೆಯ ಕಥೆ ವಾಸ್ತವ ಜಗತ್ತಿಗೆ ಎಷ್ಟು ಪೂರಕವಾಗುತ್ತದೆ? ಅದರ ಸವಾಲುಗಳೇನು?**

ಸಾಮಾನ್ಯವಾಗಿ ಧಾರಾವಾಹಿಗಳಲ್ಲಿ ಸಮಾಜದಲ್ಲಿ ಸಂಭವಿಸುವ ನಿತ್ಯದ ಕಥನಗಳೇ ಇರುತ್ತವೆ. ಅದರಲ್ಲಿ ಅತ್ತೆ–ಸೊಸೆಯ ನಾಟಕ, ಸರಸ–ವಿರಸ ಎಲ್ಲ ಬರುತ್ತದೆ. ಆಮ್ರಪಾಲಿ ಪಾತ್ರ ಡೈಲಾಗ್ ಹೇಳಿ ಹೋಗುವ ಪಾತ್ರ ಅಲ್ಲ. ತನ್ನದೇ ಆದ ಅನನ್ಯತೆ ಉಳಿಸಿಕೊಳ್ಳುತ್ತದೆ. ಚಿತ್ರೀಕರಣ ನಿರ್ಜನ ಪ್ರದೇಶ, ಕಾಡು, ಗ್ರೀನ್ ಮ್ಯಾಟ್‌ನಲ್ಲಿಯೂ ಇರುತ್ತದೆ. ಫೈಟಿಂಗ್ ಸಂದರ್ಭವೂ ಎದುರಾಗುತ್ತದೆ. ಈ ಪಾತ್ರವನ್ನು ನಿಭಾಯಿಸಲು ಗಟ್ಟಿಗರಾಗಿರಬೇಕು. ನಾನು ಎಲ್ಲ ಸಿದ್ಧತೆಯನ್ನು ಮಾಡಿಕೊಂಡು ಬಂದಿದ್ದೇನೆ. ಇದಕ್ಕಾಗಿ ಸಮರ ಕಲೆಯನ್ನು ಅಭ್ಯಾಸ ಮಾಡಿದ್ದೇನೆ.

◆ **ಅಭಿನಯ ಕಲೆ ಒಲಿದದ್ದು ಹೇಗೆ?**

ಶಾಲಾ ದಿನಗಳಿಂದ ತುಂಬ ಕ್ರಿಯಾಶೀಲಳಾಗಿದ್ದೆ. ಬಹುತೇಕ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದೆ. ಡಾನ್ಸ್, ನಾಟಕ, ಸಂಗೀತದಲ್ಲಿ ಇದ್ದೆ. ಬರುಬರುತ್ತಾ ಅದರಲ್ಲಿ ಆಸಕ್ತಿ ಹೆಚ್ಚು ಬಂತು. ಕಾಲೇಜು ದಿನಗಳಲ್ಲಿ ಮಾಡೆಲಿಂಗ್ ಶುರುಮಾಡಿದೆ. ನಂತರ ಸೀರಿಯಲ್, ಸಿನಿಮಾಗಳಲ್ಲಿ ತೊಡಗಿದ್ದೇನೆ.

◆ **ಬೇರೆ ಬೇರೆ ಕ್ಷೇತ್ರಗಳ ಕೆಲಸದ ಅನುಭವ ನಟನೆಗೆ ಎಷ್ಟು ಪೂರಕವಾಗುತ್ತವೆ?**

ಮಾಡೆಲಿಂಗ್ ಮಾಡುವುದು ಕ್ಯಾಮೆರಾಕ್ಕೆ ಹೇಗೆ ಮುಖಾಮುಖಿ ಆಗಬೇಕು ಎನ್ನುವ ಆತ್ಮವಿಶ್ವಾಸ ವೃದ್ಧಿಸುತ್ತದೆ. ಡಾನ್ಸ್‌ನಿಂದ ಭಾವನೆಗಳನ್ನು ಅಭಿವ್ಯಕ್ತಿಸಲು, ಅದರತ್ತ ಗಮನ ಕೇಂದ್ರೀಕರಿಸಲು ಅನುಕೂಲವಾಗುತ್ತದೆ. ನೃತ್ಯ ಭಾವನೆಯನ್ನು ಪ್ರಕಟಿಸುವ ಕಲೆ. ಗಾಯನದಿಂದ ನಮ್ಮ ಧ್ವನಿಯಲ್ಲಿ ಹತೋಟಿ ಸಾಧಿಸಿಕೊಳ್ಳಲು ಸಾಧ್ಯ ಆಗುತ್ತದೆ. ಭಾವುಕ ಸ್ಥಿತಿಯಲ್ಲಿ ನಮ್ಮ ಧ್ವನಿಗೊಂದು ಕಂಪನಬೇಕಾಗುತ್ತದೆ. ಅದು ಸಂಗೀತದಿಂದ ಸಹಕಾರಿ. ವೃತ್ತಿಪರವಾಗಿ ಸಂಗೀತ ಮತ್ತು ನೃತ್ಯವನ್ನು ತೆಗೆದುಕೊಳ್ಳದೇ ಇದ್ದರೂ ಈ ಕಲೆಗಳ ಮೂಲತತ್ವ ಗೊತ್ತಿರುವುದರಿಂದ ನಟನೆಗೆ ತುಂಬ ಪ್ರಯೋಜನ ಆಗುತ್ತಿದೆ.

◆ **ನಿಮ್ಮ ಬಾಲ್ಯದ ದಿನಗಳು ಹೇಗಿದ್ದವು?**

ನಾನು ಹುಟ್ಟಿದ್ದು ಕನಕಪುರ ಸಮೀಪದ ಮರಳವಾಡಿ. ಬೆಳೆದಿದ್ದು ಬೆಂಗಳೂರಿನಲ್ಲಿ. ಶಾಲಾದಿನಗಳಲ್ಲಿ ಕಬಡ್ಡಿ ಆಡ್ತಿದ್ದೆ. ಓದುವಾಗ ರಾಜ್ಯಮಟ್ಟದ ಸ್ಪರ್ಧೆಯಲ್ಲೂ ಭಾಗವಹಿಸಿದ್ದೇನೆ. ಎಲ್ಲ ಕ್ರೀಡೆಯಲ್ಲಿ ಚೆನ್ನಾಗಿದ್ದೆ. ಓದುವುದರಲ್ಲಿಯೂ ಕಡಿಮೆ ಇರಲಿಲ್ಲ. ಚಿಕ್ಕವಳಿದ್ದಾಗ ಪೊಲೀಸ್ ಇಲಾಖೆಯಲ್ಲಿ ಕೆಲಸ ಮಾಡಬೇಕು ಅಂದುಕೊಂಡಿದ್ದೆ. ಬೆಳೆಯುತ್ತಾ ಪೈಲಟ್ ಕನಸು ಮೂಡಿತು. ಹಾಗೆಂದು ನಟಿ ಆಗಬೇಕು ಎನ್ನುವ ಕನಸಿರಲಿಲ್ಲ ಎಂದಲ್ಲ. ಹೀರೊಯಿನ್ ಆಗಬೇಕು ಎಂಬ ಗುರಿ ಇದೆ ಎಂದು 8ನೇ ತರಗತಿಯಲ್ಲಿ ಹೇಳಿದ್ದೆ. ಅದನ್ನು ನನ್ನ ಸ್ನೇಹಿತರು ಈಗಲೂ ನೆನಪಿಸುತ್ತಾರೆ. ಪೊಲೀಸ್ ಅಧಿಕಾರಿ ಆಗುವ ಅವಕಾಶ ಸಿಕ್ಕರೆ ಖಂಡಿತ ಹೋಗುತ್ತೇನೆ. ನಟನೆ ಪ್ಯಾಶನ್ ಆಗಿತ್ತು. ಅದು ಗೊತ್ತಿಲ್ಲದಂತೆ ವೃತ್ತಿಪರವಾಗಿ ಬದಲಾಗಿದೆ.

◆ **ಸಾಮಾಜಿಕ ಮಾಧ್ಯಮಗಳನ್ನು ಹೇಗೆ ನಿರ್ವಹಿಸುತ್ತೀರಿ?**

ಸಾಮಾಜಿಕ ಮಾಧ್ಯಮಗಳನ್ನು ನಾನು ಹೆಚ್ಚು ಬಳಸುವುದಿಲ್ಲ. ಹದಿಹರೆಯದಲ್ಲಿ ಒಂದಿಷ್ಟು ಆಕರ್ಷಣೆ ಇತ್ತು. ಏನಾದರೂ ಪೋಸ್ಟ್ ಮಾಡಬೇಕು ಎನ್ನುವ ಬಯಕೆಯೂ ಇತ್ತು. ಈಗ ಆ ಆಸಕ್ತಿ ಇಲ್ಲ. ಸಮಯ ಸಿಕ್ಕಾಗ ನೋಡುತ್ತಿರುತ್ತೇನೆ.

**■ ರಾಘವೇಂದ್ರ ಕೆ.**